**ದಿನಾಂಕಃ 19.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದ**

ಸದರಿ ದಾವೆಯಲ್ಲಿ ನಾನು 1 ನೇ ಪ್ರತಿವಾದಿ. ಸದರಿ ದಾವೆಯನ್ನು ಸುರಯ್ಯ ಬೇಗಂ ರವರ ವಿರುದ್ಧ ಹೂಡಿರುತ್ತೇನೆ. ದಾವಾಸ್ವತ್ತು ನಮ್ಮದೆಂದು ಹಾಗೂ ಸುರಯ್ಯ ಬೇಗಂರವರ ಯಜಮಾನರು ನಮಗೆ ಸ್ವತ್ತನ್ನು ನೀಡಿರುತ್ತಾರೆ, ಅದನ್ನು ನಮಗೆ ಬಿಡಿ ಎಂದು ಕೋರಿ ಸಲ್ಲಿಸಿರುತ್ತೇನೆ. ದಾವಾಸ್ವತ್ತಿನ ಖಾತಾ ನಂಬರ್ ಅಥವಾ ಚೆಕ್ಕುಬಂಧಿಯನ್ನು ಹೇಳಲಾಗುವುದಿಲ್ಲ. ದಾವಾಸ್ವತ್ತಿನ ವಿಸ್ತೀರ್ಣ ಮೀಟರ್ ನಲ್ಲಿ ಗೊತ್ತಿರುವುದಿಲ್ಲ. ಅಡಿಗಳಲ್ಲಿ 30 X 12. ದಾವಾಸ್ವತ್ತಿನ ಮೂಲ ಮಾಲೀಕರು ಯಾರೆಂದು ಹೇಳಲಾಗುವುದಿಲ್ಲ. ನಾನು ಅಶ್ವತ್ಥನಾರಾಯಣ ಎಂಬುವವರ ಜೊತೆ 1995-1996 ರಲ್ಲಿ ಮದುವೆಯಾಗಿರುತ್ತೇನೆ. ಅವರ ಜೊತೆ 3 ವರ್ಷಗಳವರೆಗೆ ವಾಸವಾಗಿರುತ್ತೇನೆ. 1998 ರಲ್ಲಿ ಮಗುವಾಗಿರುತ್ತದೆ. ಬಾಣಂತನಕ್ಕೆ ಹೋದಾಗ ನಾನು ಅಲ್ಲಿಯೇ ಉಳಿದುಕೊಂಡಿರುತ್ತೇನೆ. ನಂತರ ವಾಪಸ್ಸು ಗಂಡನ ಮನೆಗೆ ಬಂದಿರುವುದಿಲ್ಲ. ಕಾರಣ ಅವರು ಬೇರೆ ಮದುವೆ ಮಾಡಿಕೊಂಡಿರುತ್ತಾರೆ. ಮದುವೆಯ ಸಮಯದಲ್ಲಿ ನನ್ನ ಗಂಡ ಸೈಕಲ್ ಅಂಗಡಿಯನ್ನು ಇಟ್ಟುಕೊಂಡಿರುತ್ತಾರೆ.

ದಿಃ 31.01.1975 ರಲ್ಲಿ ನನ್ನ ಅತ್ತೆಯು ದಾವಾಸ್ವತ್ತನ್ನು ಅವರ ಸ್ವಂತ ಹಣದಿಂದ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ಮಾವನವರು ಹಣ ಹಾಕಿ ಖರೀದಿಸಿ ನನ್ನ ಅತ್ತೆಯ ಹೆಸರಿಗೆ ಮಾಡಿರುತ್ತಾರೆ. ಸದರಿ ವಿಷಯವನ್ನು ನನ್ನ ಗಂಡ ನನಗೆ ತಿಳಿಸಿರುತ್ತಾರೆ. ನನಗೆ ಖುದ್ದು ಮಾಹಿತಿ ಇರುವುದಿಲ್ಲ. ನನ್ನ ಅತ್ತೆ ಮತ್ತು ಮಾವ ದಾವಾಸ್ವತ್ತಿನ ಪಕ್ಕದಲ್ಲಿ ಒಂದು ದೊಡ್ಡ ಸೈಟಿನಲ್ಲಿ ಒಂದು ಚಿಲ್ಲರೆ ಅಂಗಡಿಯನ್ನು ನಡೆಸುತ್ತಿದ್ದಾರೆ. ಅಲ್ಲಿ ಬೇರೆ ಅಂಗಡಿಗಳು ಇಲ್ಲದೇ ಇರುವ ಕಾರಣ ಅವರಿಗೆ ವ್ಯಾಪಾರ ಚೆನ್ನಾಗಿ ಆಗುತ್ತಿರುತ್ತದೆ. ನನ್ನ ಮಾವನವರಾದ ವೆಂಕಟಶ್ಯಾಮಪ್ಪರವರು ಯಾವಾಗ ತೀರಿಕೊಂಡಿರುತ್ತಾರೆ ಎಂದು ಗೊತ್ತಿಲ್ಲ. ದಿಃ 31.01.1975 ರಲ್ಲಿ ನನ್ನ ಅತ್ತೆ ನಾಗಮ್ಮರವರು ದಾವಾಸ್ವತ್ತನ್ನು ಕೊಂಡಿಕೊಂಡಿದ್ದರು, ಅಂದಿನಿಂದ ಅವರ ಹೆಸರಿನಲ್ಲಿ ಮುನಿಸಿಪಾಲಿಟಿಯ ಖಾತೆಯಲ್ಲಿ ಅವರ ಹೆಸರು ಇರುತ್ತದೆ ಎಂದರೆ ಸರಿ. ನನ್ನ ಯಜಮಾನರು 2020-2021 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ಅತ್ತೆ ನಾಗಮ್ಮರವರು 2023 ರಲ್ಲಿ ತೀರಿಕೊಂಡಿರುತ್ತಾರೆ. ದಾವಾಸ್ವತ್ತು ನನ್ನ ಅತ್ತೆ ನಾಗಮ್ಮರವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಅದು ಒಟ್ಟು ಕುಟುಂಬದ ಸ್ವತ್ತು, ನಾನು ಮದುವೆಯಾದಾಗಿನಿಂದಲೂ ಒಟ್ಟು ಕುಟುಂಬದಲ್ಲಿ ಇತ್ತು. ನನ್ನ ಅತ್ತೆ ಮತ್ತು ಮಾವ, ಭಾಗ್ಯಮ್ಮ, ಜಯಮ್ಮ, ಶಾರದಮ್ಮ, ಅಶ್ವತ್ಥನಾರಾಯಣ ಹಾಗೂ ನಾನು ಇದ್ದೆವು. ನನ್ನ

ಮದುವೆಯಾಗುವ ಮೊದಲೇ ನನ್ನ ಗಂಡನ ಅಕ್ಕಂದಿರ ಮದುವೆಯಾಗಿರುತ್ತದೆ. ಅವರು ಅವರ ಗಂಡನ ಮನೆಗೆ ಹೋಗಿರುತ್ತಾರೆ.

ನನ್ನ ಅತ್ತೆಯವರು ಸಾಯುವ ಮೊದಲು ಒಂದು ವರ್ಷದಿಂದ ದೈಹಿಕ ಹಾಗೂ ಮಾನಸಿಕ ಖಾಯಿಲೆಯಿಂದ ಬಳಲುತ್ತಿದ್ದು, ಅವರು ರಸ್ತೆಯಲ್ಲಿ ಭಿಕ್ಷೆಯನ್ನು ಸಹ ಬೇಡಿರುತ್ತಾರೆ. ಅವರು ಸಾಯುವ ಮೊದಲು ಅವರಿಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ಅವರು ಮನೆಗಳನ್ನು ಲೀಜ್‌ಗೆ ಬಿಟ್ಟಿದ್ದರು, ಅದರಿಂದ ವರಮಾನ ಬರುತ್ತಿತ್ತು, ಆದರೆ ಯಾವ ಮನೆ ಯಾರಿಗೆ ಲೀಜ್‌ಗೆ ಕೊಟ್ಟಿರುತ್ತಾರೆ ಎಂದು ಗೊತ್ತಿಲ್ಲ. ಸಾಯುವ 3 ವರ್ಷದ ಮೊದಲು ನನ್ನ ಅತ್ತೆಗೆ ಚಿಕಿತ್ಸೆಗೆ ಹಣ ಬೇಕಾಗಿದ್ದ ಕಾರಣ ಅವರು ದಾವಾಸ್ವತ್ತನ್ನು ವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಅಶ್ವತ್ಥಪ್ಪರವರು ಗೊತ್ತಿರುತ್ತಾರೆ, ಅವರು ನನ್ನ ಗಂಡನ ಅಕ್ಕ ಗಂಡ. ಅವರು ಸದರಿ ಕ್ರಯ ಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಹಾಕಿರುತ್ತಾರೆ ಹಾಗೂ ಕ್ರಯದಿಂದ ಬಂದ ಹಣದಿಂದ ನನ್ನ ಅತ್ತೆಯವರ ಚಿಕಿತ್ಸೆಗೆ ಹಾಗೂ ಅವರ ಶವಸಂಸ್ಕಾರಕ್ಕೆ ಹಣವನ್ನು ಬಳಕೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ಅತ್ತೆಯವರು ಖರೀದಿಸಿದ ಕ್ರಯ ಪತ್ರ (ನಿಪಿ-2) ದಿಃ 31.01.1975 ರಲ್ಲಿ ನನ್ನ ಸ್ವಯಾರ್ಜಿತ ಹಣದಿಂದ ಸದರಿ ಕ್ರಯ ಪತ್ರದ ಅನುಸೂಚಿ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದು ಬರೆಸಿರಲಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ-2 ರಲ್ಲಿರುವ ಅವರ ಅತ್ತೆಯ ಛಾಯಾಚಿತ್ರವನ್ನು ತೋರಿಸಿ ಪ್ರಶ್ನಿಸಿದಾಗ ಸಾಕ್ಷಿಯು ಸದರಿ ಛಾಯಾಚಿತ್ರದಲ್ಲಿರುವ ವ್ಯಕ್ತಿಯು ನನ್ನ ಅತ್ತೆ ಎಂದು ಗುರುತಿಸಿರುತ್ತಾರೆ. ಸದರಿ ಭಾವಚಿತ್ರವನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆಯು ದಾವಾಸ್ವತ್ತಿನ ಇ-ಖಾತೆಯಾಗಿದ್ದು, ಮಾರಾಟಕ್ಕೂ ಮೊದಲು ಸದರಿ ದಾಖಲೆಯ ಪ್ರಕಾರ ನನ್ನ ಅತ್ತೆಯವರ ಭಾವಚಿತ್ರ ಇ-ಖಾತೆಯಲ್ಲಿ ಇರುತ್ತದೆ ಎಂದರೆ ಸರಿ. ಸದರಿ ದಾಖಲೆಯನ್ನು ನಿಪಿ-14 ಮತ್ತು ಭಾವಚಿತ್ರವನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ದಾವಾಸ್ವತ್ತನ್ನು ಖರೀದಿ ಮಾಡಿದ ನಂತರ ವಾದಿಯು ಅವರ ಹೆಸರಿನಲ್ಲಿ ಮುನಿಸಿಪಾಲಿಟಿ ಖಾತೆಯಲ್ಲಿ ಅವರ ಹೆಸರಿಗೆ ಬದಲಾಯಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅವರ ಹೆಸರಿನಲ್ಲಿ ಖಾತೆಯಾಗಿರುವ ಬಗ್ಗೆ ನನಗೆ ಗೊತ್ತಿಲ್ಲ, ನಾನು ವಾದಿಯನ್ನು ನೋಡಿರುವುದಿಲ್ಲ.

ವಾದಿಯು ಮುನಿಸಿಪಾಲಿಟಿಯಲ್ಲಿ ಪರವಾನಿಗೆ ಪಡೆದು ಹಳೆ ಮನೆಯನ್ನು ಕೆಡವಿ ಹೊಸ ಮನೆಯನ್ನು ಕಟ್ಟಲು ಪ್ರಾರಂಭಿಸುತ್ತಿರುವಾಗ ನಾನು ಅವರಿಗೆ ಅಡಚಣೆಯನ್ನು ಮಾಡಿರುತ್ತೇನೆ ಎಂದರೆ ಸರಿ. ನನ್ನ ಅತ್ತೆಯವರಿಗೂ ಸಹ ವಾದಿಯು ಮನೆಕೆಡವಿ ಮನೆಕಟ್ಟುತ್ತಿರುವುದನ್ನು

ಯಾಕೆ ಪ್ರಶ್ನಿಸಿರುವುದಿಲ್ಲ ಎಂದು ನಾನು ಕೇಳಿದಾಗ ಅವರು ನನಗೆ ಗೊತ್ತಿರುವುದಿಲ್ಲ ವಾದಿಯೇ ಆ ರೀತಿ ದಾಖಲೆಗಳನ್ನು ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಅತ್ತೆಯವರು ವಾದಿಗೆ ದಾವಾಸ್ವತ್ತನ್ನು ಮಾರಾಟ ಮಾಡಿರುತ್ತೇನೆ, ಅವರು ಅಲ್ಲಿ ಮನೆಯನ್ನು ಕಟ್ಟಿಕೊಳ್ಳಲಿ ನನಗೆ ಬೇರೆ ಆಸ್ತಿಯಲ್ಲಿ ಭಾಗವನ್ನು ಕೊಡುತ್ತೇನೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ನನ್ನ ಅತ್ತೆಯು ನನಗೆ ತಿಳಿಸಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ರಯದಿಂದ ಬಂದ ಹಣದಲ್ಲಿ ನನ್ನ ಯಜಮಾನರಿಗೆ ಭಾಗವನ್ನು ಕೊಡುತ್ತೇನೆ ಎಂದು ನಮ್ಮ ಅತ್ತೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ವಾದಿಯ ಹೆಸರಿನಲ್ಲಿರುವ ದಾಖಲೆಗಳನ್ನು ಪ್ರಶ್ನಿಸಿರುತ್ತೀರಾ ಎಂದರೆ ಅದರ ಬಗ್ಗೆ ಗೊತ್ತಿಲ್ಲ, ವಕೀಲರಿಗೆ ತಿಳಿಸಿರುತ್ತೇನೆ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**